ಕರ್ನಾಟಕ ಸರ್ಕಾರ

ಸಂಖ್ಯೆ: ತಾಶಿಇ/ 66 /ಎಸ್‌ಸಿಹೆಚ್ (2)/ 2011-12

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 10-10-2011.

## -: ಸುತ್ತೋಲೆ :-

**ವಿಷಯ:** ಖಾಸಗಿ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ವ್ಯಾಸಂಗ ಮಾಡುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ **2011-2012** ನೇ ಸಾಲಿಗೆ ಶುಲ್ಕ ವಿನಾಯಿತಿ ಮಂಜೂರು ಮಾಡುವ ಬಗ್ಗೆ.

**ಉಲ್ಲೇಖ:** 1) ಸರ್ಕಾರದ ಆದೇಶ ಸಂ: ಎಸ್‌ಡಬ್ಲ್ಯುಎಲ್/22೯/ಬಿಸಿಎ/80, ದಿ:16/12/82
2) ಸರ್ಕಾರದ ಆದೇಶ ಸಂ: ಇಡಿ 116 ಟಿಪಿಇ 9೭, ದಿ: 17/6/2000.

-00000000-

೧. ಖಾಸಗಿ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಕರ್ನಾಟಕದ ವಿದ್ಯಾರ್ಥಿಗಳಿಗೆ **2011-2012** ನೇ ಸಾಲಿನಲ್ಲಿ ಶುಲ್ಕ ವಿನಾಯಿತಿಯನ್ನು ನೀಡಲು ಅರ್ಜಿಯನ್ನು ಕರೆಯಲಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಭಾರತ ಸರ್ಕಾರದ ವಿದ್ಯಾರ್ಥಿವೇತನಕ್ಕೆ ಅರ್ಹತೆ ಇಲ್ಲದಿದ್ದರೆ ಅಂದರೆ ವಾರ್ಷಿಕ ಆದಾಯ **₹ 2,00,000/-** ಮೀರಿದ್ದರೆ ಮತ್ತು ಯಾವುದೇ ವಿದ್ಯಾರ್ಥಿವೇತನ ಮಂಜೂರು ಆಗದಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ಶಿಕ್ಷಣ ಶುಲ್ಕ, ಪರೀಕ್ಷಾ ಶುಲ್ಕ ಹಾಗೂ ಇತರೇ ಎಲ್ಲಾ ಶುಲ್ಕ ವಿನಾಯಿತಿ ಪಡೆಯಲು ಅರ್ಹರಾಗಿರುತ್ತಾರೆ.

೨. ಖಾಸಗಿ ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರು ಸೂಚನ ಫಲಕದಲ್ಲಿ ವಿದ್ಯಾರ್ಥಿಗಳಿಗೆ ಅರ್ಜಿಯನ್ನು ಸಲ್ಲಿಸುವಂತೆ ಪ್ರಕಟಣೆಯನ್ನು ಪ್ರಚುರಪಡಿಸಬೇಕು. ಪಾಲಿಟೆಕ್ನಿಕ್‌ನ ಆಯಾ ವಿಭಾಗದ ಮುಖ್ಯಸ್ಥರ ಮೂಲಕ ಅಥವಾ ಸೂಕ್ತವಾದ ರೀತಿಯಲ್ಲಿ ಪ್ರತಿ ವಿದ್ಯಾರ್ಥಿಯ ಗಮನಕ್ಕೆ ತಪ್ಪದೇ ಮಾಹಿತಿ ತಲುಪುವ ರೀತಿಯಲ್ಲಿ ಪ್ರಿನ್ಸಿಪಾಲರು ಸೂಕ್ತ ವ್ಯವಸ್ಥೆ ಮಾಡಬೇಕು. ವಿದ್ಯಾರ್ಥಿಗಳಿಗೆ ಮಾಹಿತಿ ಸಿಗದೇ, ಅರ್ಜಿ ಹಾಕಲು ಸಾಧ್ಯವಾಗಲಿಲ್ಲ ಎಂಬ ದೂರು ವಿದ್ಯಾರ್ಥಿಗಳಿಂದ ಬಾರದ ರೀತಿಯಲ್ಲಿ ಎಚ್ಚರವಹಿಸತಕ್ಕದ್ದು.

೩. ವಿದ್ಯಾರ್ಥಿಗಳಿಂದ ಶುಲ್ಕ ವಿನಾಯಿತಿಗೆ ಪೂರ್ಣವಾಗಿ ತುಂಬಿದ ಅರ್ಜಿಯನ್ನು ದ್ವಿಪ್ರತಿಯಲ್ಲಿ ಪಡೆಯಬೇಕು. ಅರ್ಜಿಯ ಜೊತೆಯಲ್ಲಿ ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡಕ್ಕೆ ಸೇರಿರುವ ಬಗ್ಗೆ ನಿಗದಿಪಡಿಸಿದ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಪ್ರಾಧಿಕಾರದ ಅಧಿಕಾರಿಗಳ ದೃಢೀಕರಣದೊಂದಿಗೆ ಈ ಪತ್ರದಲ್ಲಿ ತಿಳಿಸಿದ ಇತರೆ ದಾಖಲೆಗಳನ್ನು ಲಗತ್ತಿಸಿರಬೇಕು. ಒಂದು ಪ್ರತಿಯನ್ನು ಪಾಲಿಟೆಕ್ನಿಕ್ ಕಛೇರಿಯಲ್ಲಿ ದಾಖಲಾತಿಗೆ ಇಟ್ಟುಕೊಂಡು ಮೂಲ ಅರ್ಜಿ (ಪ್ರಿನ್ಸಿಪಾಲರ ಶಿಫಾರಸ್ಸಿನೊಂದಿಗೆ) ಹಾಗೂ ಇತರೆ ಪ್ರಮಾಣ ಪತ್ರವನ್ನು ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿ ಈ ಕಛೇರಿಗೆ ಮಂಜೂರಾತಿಗಾಗಿ ಕಳುಹಿಸಿಕೊಡತಕ್ಕದ್ದು.

೪. ಅರ್ಹ ವಿದ್ಯಾರ್ಥಿಗಳಿಂದ ಪಾಲಿಟೆಕ್ನಿಕ್‌ಗಳಲ್ಲಿ ಅರ್ಜಿಗಳನ್ನು ಸ್ವೀಕರಿಸಲು ಅಂತಿಮ ದಿನಾಂಕ **20-10-2011** ನಿಗಧಿಪಡಿಸಲಾಗಿದೆ. ನಿಗಧಿಪಡಿಸಿದ ದಿನಾಂಕದ ನಂತರ ಬಂದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಸ್ವೀಕರಿಸಬಾರದು. ಹಿಂದಿನ ಸಾಲಿಗೆ ಸಂಬಂಧಿಸಿದಂತೆ, ಶುಲ್ಕ ವಿನಾಯಿತಿಯ ಪ್ರಸ್ತಾವನೆಗಳನ್ನು ಪ್ರಸಕ್ತ ಸಾಲಿನಲ್ಲಿ ಪರಿಗಣಿಸಲಾಗುವುದಿಲ್ಲ. ಆದ್ದರಿಂದ ಈ ರೀತಿಯ ಪ್ರಸ್ತಾವನೆಗಳನ್ನು ಕಳುಹಿಸಬಾರದು.

೫. ಶುಲ್ಕ ವಿನಾಯಿತಿಗೆ ಅರ್ಹರಾಗಿರುವವರಿಗೆ ಪ್ರಸ್ತಾವನೆಗಳನ್ನು ಮಂಜೂರಾತಿಗೆ ಕಳುಹಿಸುವ ಮೊದಲು ಕೂಲಂಕುಶವಾಗಿ ಕೆಳಗೆ ನೀಡಿರುವ ಸೂಚನೆಯ ಅನುಸಾರ ಪರಿಶೀಲಿಸಿ ವಿದ್ಯಾರ್ಥಿಗಳ ಅರ್ಜಿ ಮತ್ತು ಅಗತ್ಯವಾದ ದೃಢೀಕರಿಸಿದ ಪ್ರಮಾಣ ಪತ್ರವನ್ನು ಕಳುಹಿಸಿಕೊಡಬೇಕು.

ಅ) ವಿದ್ಯಾರ್ಥಿಗಳು ಸಲ್ಲಿಸುವ ಜೆರಾಕ್ಸ್ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಬೇಕು.

ಆ) ವಿದ್ಯಾರ್ಥಿಗಳು ನಿಗಧಿಪಡಿಸಿರುವ ಪರಿಷ್ಕರಿಸಿದ ಅರ್ಜಿ ನಮೂನೆ-1 ಯಲ್ಲಿಯೇ ಮಾಹಿತಿ ತುಂಬಿ ಸಲ್ಲಿಸಬೇಕು.

ಇ) **2010-11** ಮತ್ತು **2011-12** ನೇ ಸಾಲಿನಲ್ಲಿ ಪ್ರಥಮ ವರ್ಷ ಡಿಪ್ಲೊಮಾಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು **ಕೇಂದ್ರೀಕೃತ ಪ್ರವೇಶ ಘಟಕದಲ್ಲಿ (ನೋಡಲ್ ಸೆಂಟರ್) ಪ್ರವೇಶ ಪಡೆದ ಬಗ್ಗೆ ಸೀಟು ಹಂಚಿಕೆ ಪತ್ರ ಲಗತ್ತಿಸಬೇಕು.** ಹೊಸದಾಗಿ ಶುಲ್ಕ ವಿನಾಯಿತಿಗೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು

**ಕರ್ನಾಟಕ ರಾಜ್ಯದಲ್ಲಿ ಮಾನ್ಯತೆ ಪಡೆದ ಶಿಕ್ಷಣ** ಸಂಸ್ಥೆಗಳಲ್ಲಿ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗಿನ ಅವಧಿಯಲ್ಲಿ ಕನಿಷ್ಟ ಐದು ಶೈಕ್ಷಣಿಕ ವರ್ಷಗಳ (10ನೇ ತರಗತಿ ಸೇರಿ) ಅವಧಿಯಲ್ಲಿ ವ್ಯಾಸಂಗ ಮಾಡಿರುವ ಪ್ರಮಾಣ ಪತ್ರದ ಪ್ರತಿಯನ್ನು ಸಲ್ಲಿಸಬೇಕು. 2010-11ನೇ ಸಾಲಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು, ಪ್ರಸಕ್ತ ಸಾಲಿನಲ್ಲಿ 2ನೇ ವರ್ಷ / 3ನೇ ಸೆಮಿಸ್ಟರ್ ಮತ್ತು 3ನೇ ವರ್ಷ / 5ನೇ ಸೆಮಿಸ್ಟರ್ ಡಿಪ್ಲೋಮಾ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು ಅಂತಹ ವಿದ್ಯಾರ್ಥಿಗಳು ಅಂಕಪಟ್ಟಿಗಳ ಜೊತೆಗೆ ಅರ್ಜಿ ಸಲ್ಲಿಸುವುದು.

ಈ) ಜಾತಿ ಪರಿಶೀಲಿಸಿದ ಅಥವಾ ಸಿಂಧುತ್ವ ಪ್ರಮಾಣ ಪತ್ರದ ಪ್ರತಿಯನ್ನು ಸಹ ಕಡ್ಡಾಯವಾಗಿ ಸಲ್ಲಿಸಬೇಕು.

ಉ) ನವೀಕರಣವಾಗಿದ್ದ ಪಕ್ಷದಲ್ಲಿ ಹಿಂದಿನ ವರ್ಷದ ಮಂಜೂರಾತಿಯ ಆದೇಶ ಕ್ರಮಾಂಕ ಮತ್ತು ದಿನಾಂಕ ನಮೂದಿಸಿರಬೇಕು. ನವೀಕರಣ ಕೋರಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಹಿಂದಿನ ಮಂಜೂರಾತಿಯ ಆದೇಶ ಮತ್ತು ಅನುಬಂಧದ ಪ್ರತಿಗಳನ್ನು ಪಾಲಿಟೆಕ್ನಿಕ್‌ನ ಕಛೇರಿಯವರು ಪ್ರಸ್ತಾವನೆಯೊಂದಿಗೆ ಲಗತ್ತಿಸಿರಬೇಕು.

ಊ) ವಿದ್ಯಾರ್ಥಿಯು ಡಿಪ್ಲೋಮಾ ವ್ಯಾಸಂಗದ ಅವಧಿಯಲ್ಲಿ ವ್ಯಾಸಂಗವನ್ನು ಮೊಟಕುಗೊಳಿಸಿದ ಸಂದರ್ಭದಲ್ಲಿ ವಿವರವನ್ನು ಹಾಗೂ ಕಾರಣವನ್ನು ಅರ್ಜಿಯಲ್ಲಿ ನಮೂದಿಸಿರಬೇಕು. ವಿದ್ಯಾರ್ಥಿಯಿಂದ ಪ್ರತ್ಯೇಕವಾದ ವಿವರಣೆ ಪತ್ರ ಮತ್ತು ಅದರ ಬಗ್ಗೆ ಪ್ರಿನ್ಸಿಪಾಲರು ಶಿಫಾರಸ್ಸು ಲಗತ್ತಿಸಬೇಕು.

ಋ) ವಿದ್ಯಾರ್ಥಿಯ ತಂದೆ/ತಾಯಿ/ಪೋಷಕರು ಸರ್ಕಾರಿ/ಸರ್ಕಾರದ ಉದ್ದಿಮೆ/ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಲ್ಲಿ ಅವರ ಮೇಲಧಿಕಾರಿಗಳಿಂದ ಆದಾಯ ಪತ್ರ ಪಡೆದು ಸಲ್ಲಿಸಬೇಕು. ಪತ್ರಾಂಕಿತ ಅಧಿಕಾರಿಗಳಾಗಿದ್ದಲ್ಲಿ ಎ.ಜಿ ಕಛೇರಿಯವರು ನೀಡಿರುವ ಪೇ ಸ್ಲಿಪ್‌ನ ಪ್ರತಿಯನ್ನು ನೀಡಬಹುದು. ಖಾಸಗಿ, ಮತ್ತು ಸ್ವಉದ್ಯೋಗದಲ್ಲಿರುವವರು ಸಂಬಂಧ ಪಟ್ಟ ತಹಸೀಲ್ದಾರರಿಂದ ಆದಾಯ ಪ್ರಮಾಣಪತ್ರ ಪಡೆದು ಸಲ್ಲಿಸಬೇಕು. ಪಿಂಚಣಿದಾರರು ಪಿಂಚಣಿ ಆದೇಶದ ಪ್ರತಿ ಅಥವಾ ಖಜಾನೆಯ ಪುಸ್ತಕದಲ್ಲಿ ನಮೂದಿಸಿರುವ ಪಿಂಚಣಿ ಪಾವತಿಯ ವಿವರದ ಪ್ರತಿ ಅಥವಾ ಪಿಂಚಣಿಯನ್ನು ಬ್ಯಾಂಕಿನಿಂದ ಪಡೆಯುತ್ತಿದ್ದರೆ ಆ ಬ್ಯಾಂಕಿನ ಮ್ಯಾನೇಜರ್‌ರವರಿಂದ ಪಿಂಚಣಿ ದೃಢೀಕರಣ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.

ಋೂ) ವಿದ್ಯಾರ್ಥಿಯ ಸದ್ವರ್ತನೆ ಹಾಗೂ ನಿಯತ ಹಾಜರಾತಿಯನ್ನು ಗಮನಿಸಿ ಪ್ರತಿಯೊಂದಿಗೆ ವಿದ್ಯಾರ್ಥಿಯ ಅರ್ಜಿಯಡಿಯಲ್ಲಿ ಪ್ರಿನ್ಸಿಪಾಲರು ಲಿಖಿತವಾಗಿ ಶಿಫಾರಸ್ಸು ಮಾಡಿ ತಪ್ಪದೆ ಸಹಿಮಾಡಿ ಮೊಹರು ಹಾಕಿರಬೇಕು.

ಎ) ವಿದ್ಯಾರ್ಥಿಯ ಹಿಂದಿನ ವರ್ಷದ ಅರ್ಹತೆ ಪಡೆದ ಅಂಕಪಟ್ಟಿಯ ಪ್ರತಿಯನ್ನು ಲಗತ್ತಿಸಬೇಕು. **2011-12**ನೇ ಸಾಲಿನಲ್ಲಿ ದ್ವಿತೀಯ ಮತ್ತು ತೃತೀಯ ವರ್ಷ ಡಿಪ್ಲೋಮಾ ತರಗತಿಗೆ ಸೇರ್ಪಡೆಯಾದ ವಿದ್ಯಾರ್ಥಿಗಳು, ತೇರ್ಗಡೆಯಾದ ಹಿಂದಿನ ವರ್ಷಗಳ ಡಿಪ್ಲೋಮಾ ಪರೀಕ್ಷೆಯ (ಪೂರಕ ಪರೀಕ್ಷೆ ಸೇರಿದಂತೆ) ಎಲ್ಲಾ ಅಂಕಪಟ್ಟಿಗಳನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು.

೬. ಅಂತಿಮ ದಿನಾಂಕದೊಳಗೆ ಬಂದ ಅರ್ಹರಾದ ಎಸ್‌ಸಿ ಮತ್ತು ಎಸ್‌ಟಿ ವಿದ್ಯಾರ್ಥಿಗಳ ಹೆಸರುಗಳನ್ನು ಅನುಕ್ರಮವಾಗಿ ಲಗತ್ತಿಸಿರುವ ಅನುಬಂಧ-1ಎ ಮತ್ತು 1ಬಿ ರಲ್ಲಿ ಪಟ್ಟಿ ಮಾಡಿ ಎರಡು ಪ್ರತಿಗಳಲ್ಲಿ ಒಟ್ಟಾಗಿ ಕಳುಹಿಸಿಕೊಡಬೇಕು. ಪ್ರತಿಯೊಂದು ಪ್ರತಿಯ ಮೇಲೆ ಪ್ರಿನ್ಸಿಪಾಲರ ಸಹಿ ಹಾಗೂ ಮೊಹರು ಹಾಕಿರಬೇಕು. ಪ್ರತಿಯೊಂದು ಪ್ರತಿಯಲ್ಲಿಯೂ ಎಲ್ಲಾ ಪ್ರಮಾಣ ಪತ್ರಗಳನ್ನು ದೃಢೀಕರಿಸಬೇಕು. ಪ್ರಸ್ತಾವನೆಯನ್ನು ಒಬ್ಬೊಬ್ಬ ವಿದ್ಯಾರ್ಥಿಗೆ ಪ್ರತ್ಯೇಕವಾಗಿ ಸಲ್ಲಿಸಬಾರದು ಹಾಗೂ ವಿದ್ಯಾರ್ಥಿ ಮುಖೇನ ಈ ಕಛೇರಿಗೆ ಕಳುಹಿಸಿಕೊಡಬಾರದು ಎಲ್ಲಾ ಅರ್ಹ ವಿದ್ಯಾರ್ಥಿಗಳ ಪ್ರಸ್ತಾವನೆಯನ್ನು ಬಿಡಿ ಬಿಡಿಯಾಗಿ ಸಲ್ಲಿಸಿದಲ್ಲಿ ತಿರಸ್ಕರಿಸಲಾಗುವುದು. ಇದರಿಂದ ಉಂಟಾಗುವ ಪರಿಶಿಷ್ಟ ಜಾತಿ ಮತ್ತು ಮೀಸಲಾತಿ ವರ್ಗದ ವಿದ್ಯಾರ್ಥಿಗಳಿಗೆ ಸಿಗಬೇಕಾದ ಶುಲ್ಕ ವಿನಾಯಿತಿಗಳಿಗೆ ಆಯಾ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.

೭. ಅನುಬಂಧ-1ಎ ಮತ್ತು 1ಬಿ ರಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೆ ಲಭ್ಯವಾಗುವ ಶುಲ್ಕ ವಿನಾಯಿತಿಯನ್ನು ಸರ್ಕಾರದ ಆದೇಶದನ್ವಯ ಪ್ರತ್ಯೇಕವಾಗಿ ವರ್ಗಕ್ಕೆ ಸಂಬಂಧಿಸಿದಂತೆ ನಮೂನೆಯಲ್ಲಿ ನಮೂದಿಸಿರುವ ಪ್ರಕಾರ ಕ್ಲೇಮ್ ಮಾಡಿರಬೇಕು. ಒಟ್ಟಾರೆ ನಮೂದಿಸಿದ್ದಲ್ಲಿ ಅಂಗೀಕರಿಸಲಾಗುವುದಿಲ್ಲ.

೮. ವಿದ್ಯಾರ್ಥಿಗಳ ಶುಲ್ಕ ವಿನಾಯಿತಿ ಮಂಜೂರಾತಿಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸುವ ವಿಧಾನ ಶಿಫಾರಸ್ಸು ಮತ್ತು ಮಂಜೂರಾತಿಯಾದ ಅಥವಾ ಮಂಜೂರಾತಿಯಾಗದೆ ಆಕ್ಷೇಪಣೆಗಳ ಬಗ್ಗೆ ಕೆಲವು ಪಾಲಿಟೆಕ್ನಿಕ್‌ನವರು ಸೂಚನಾ ಫಲಕಗಳಲ್ಲಿ ಪ್ರಚುರಪಡಿಸದೆ, ತಿಳಿಸದೆ ಅಂತಹ ಎಲ್ಲಾ ವಿದ್ಯಾರ್ಥಿಗಳನ್ನು ಈ ನಿರ್ದೇಶನಾಲಯಕ್ಕೆ ನೇರವಾಗಿ ಕಳುಹಿಸುತ್ತಿರುವುದು ಪೂರ್ಣ ಮಾಹಿತಿ ನೀಡದೆ, ಶುಲ್ಕ ಕಟ್ಟಲು ಒತ್ತಾಯಿಸುವುದು ನಿರ್ದೇಶಕರ ಗಮನಕ್ಕೆ ಬಂದಿದೆ.

ಇಂತಹ ಪ್ರಕರಣಗಳು ಬರದ ರೀತಿಯಲ್ಲಿ ಆಯಾ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

೯. ಶುಲ್ಕ ವಿನಾಯಿತಿ ಪ್ರಸ್ತಾವನೆಯನ್ನು ಈ ಕಛೇರಿಗೆ ಅನುಮೋದನೆಗಾಗಿ ಕಳುಹಿಸಲು **30-10-2011** ರಂದು ಅಂತಿಮ ದಿನಾಂಕವೆಂದು ನಿಗಧಿಪಡಿಸಿದೆ. ತದನಂತರ ಬಂದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ. ಹಾಗೂ ಉಲ್ಲೇಖ(1)ರಲ್ಲಿ ಸರ್ಕಾರಿ ಆದೇಶ ಪ್ರಕಾರ ತಿರಸ್ಕರಿಸಲಾಗುವುದು.

೧೦. ಈ ಕಛೇರಿಯಿಂದ ಅನುಮೋದನೆ ಪಡೆದ ಒಂದು ವಾರದೊಳಗೆ ಕೆ.ಎಫ್.ಸಿ.32ಎ ಫಾರಂನಲ್ಲಿ (ಬಿಳಿಕಾಗದ) ಬಿಲ್ಲು ತಯಾರಿಸಿ ಈ ಕಛೇರಿಗೆ ಮೇಲು ಸಹಿಗಾಗಿ ಕಳುಹಿಸಬೇಕು. ಈ ಕಛೇರಿಯಿಂದ ಬಿಡುಗಡೆಯಾದ ಚೆಕ್ ಪಡೆದು ನಂತರ, ಪಾಲಿಟೆಕ್ನಿಕ್‌ಗಳ ಸೂಚನಾ ಫಲಕಗಳಲ್ಲಿ ವಿದ್ಯಾರ್ಥಿಗಳ ಹಣವನ್ನು ಪಡೆಯಲು 15 ದಿನಗಳ ಕಾಲಾವಕಾಶ ಕೊಟ್ಟು ಸೂಚನೆಯನ್ನು ಪ್ರಕಟಿಸಬೇಕು ವಿದ್ಯಾರ್ಥಿಗೆ ಶುಲ್ಕ ವಿನಾಯಿತಿಯ ಮೊತ್ತವನ್ನು ವಿತರಣೆ ಮಾಡಿ ವಿದ್ಯಾರ್ಥಿಯ ಸಹಿ ಇರುವ ರಸೀದಿಯನ್ನು ಪಡೆದು, ಮೂಲ ರಸೀದಿಯನ್ನು ಈ ನಿರ್ದೇಶನಾಲಯಕ್ಕೆ ಕಳುಹಿಸಿಕೊಡಬೇಕು. ಒಂದು ಪ್ರತಿಯನ್ನು ದಾಖಲೆಗಾಗಿ ಹಾಗೂ ಪರಿಶೀಲನೆಗಾಗಿ ನಿಮ್ಮ ಸಂಸ್ಥೆಯಲ್ಲಿ ಇಟ್ಟುಕೊಳ್ಳಬೇಕು. ಗೊತ್ತುಪಡಿಸಿದ ದಿನಾಂಕದ ಮೇಲೆ ಪಾವತಿ ಮಾಡದೆ ಉಳಿದ ಹಣವನ್ನು ಸರ್ಕಾರಕ್ಕೆ ಜಮಾ ಮಾಡಲು ಪ್ರಾಂಶುಪಾಲರು ನಿರ್ದೇಶಕರ ಹೆಸರಿಗೆ ಚೆಕ್ ಮುಖಾಂತರ ಈ ಕಛೇರಿಗೆ ಕಳುಹಿಸಬೇಕು ಮತ್ತು ಜೊತೆಗೆ ಪಾವತಿಯಾಗದಿದ್ದ ವಿದ್ಯಾರ್ಥಿಗಳ ಹೆಸರು, ತರಗತಿ, ವಿಭಾಗ ಮತ್ತು ಪಾವತಿ ಮಾಡಲು ಸಾಧ್ಯವಾಗದುದ್ದಕ್ಕೆ ಕಾರಣವನ್ನು ತಿಳಿಸಿ ವಿವರಣಾ ಪಟ್ಟಿಯನ್ನು ಕಳುಹಿಸಬೇಕು.

೧೧. ಮಂಜೂರಾತಿಯಲ್ಲಿ ವಿಳಂಬವನ್ನು ತಪ್ಪಿಸಲು ನೀಡಿರುವ ತಿಳುವಳಿಕೆಗೆ ಅನುಗುಣವಾಗಿ ಪ್ರಸ್ತಾವನೆಯನ್ನು ಸಂಬಂಧಪಟ್ಟ ಪ್ರಮಾಣ ಪತ್ರಗಳೊಡನೆ ನಿಗಧಿಪಡಿಸಿದ ದಿನಾಂಕದೊಳಗೆ ಈ ಕಛೇರಿಗೆ ಸೇರುವಂತೆ ಕಳುಹಿಸಬೇಕು.

**ಸೂಚನೆ:-** ಶಿಕ್ಷಣ ಸಂಸ್ಥೆಯವರು ಪ್ರಸ್ತಾವನೆಯನ್ನು ಅನುಬಂಧ-1ಎ ಮತ್ತು 1ಬಿ ರಲ್ಲಿ ಐದು ಪ್ರತಿಗಳಲ್ಲಿ ಎಲ್ಲಾ ಕಾಲಂಗಳನ್ನು ಭರ್ತಿಮಾಡಿ ಈ ಕೆಳಕಂಡ ಅವಶ್ಯಕ ಪ್ರಮಾಣ ಪತ್ರದ ದೃಢೀಕರಿಸಿದ ಪ್ರತಿಯನ್ನು ಹಾಗೂ ಒಂದು ಸಾಫ್ಟ್ ಕಾಪಿಯನ್ನು(ಸಿ.ಡಿ ಮುಖಾಂತರ) ತಪ್ಪದೆ ಸಲ್ಲಿಸಬೇಕು

೧) ಅಭ್ಯರ್ಥಿಯ ಹಿಂದಿನ ವರ್ಷಗಳ ಅಂಕಪಟ್ಟಿಯ ಪ್ರತಿಗಳು.
೨) ಜಾತಿ ಅಥವಾ ಸಿಂಧುತ್ವ ಪ್ರಮಾಣ ಪತ್ರದ ಪ್ರತಿ.
೩) ತಂದೆ/ತಾಯಿ/ಪೋಷಕರ ವೇತನ ದೃಢೀಕರಣ ಪತ್ರದ ಪ್ರತಿ (ಪ್ಯಾರ 5(ಬಿ) ರಂತೆ)
೪) ತಂದೆ/ತಾಯಿ ಮೃತ ಹೊಂದಿದ್ದರೆ ಮರಣ ಪ್ರಮಾಣ ಪತ್ರದ ಪ್ರತಿ.
೫) ವ್ಯಾಸಂಗ ಪ್ರಮಾಣ ಪತ್ರ (ಪ್ಯಾರ 5(ಇ) ರಂತೆ)
೬) ಶುಲ್ಕ ವಿನಾಯಿತಿ ನವೀಕರಣವಾಗಿದ್ದಲ್ಲಿ ಆ ಎಲ್ಲಾ ವಿದ್ಯಾರ್ಥಿಗಳಿಗೆ ಹಿಂದೆ ಶುಲ್ಕ ವಿನಾಯಿತಿ ಮಂಜೂರಾದ ಆದೇಶ ಪ್ರತಿಗಳನ್ನು ಸಂಸ್ಥೆಯವರು ಲಗತ್ತಿಸಬೇಕು.
೭) **ಪ್ರತಿ ವರ್ಷ ಪ್ರವೇಶ ಪಡೆದ ವಿದ್ಯಾರ್ಥಿಗಳು ಕೇಂದ್ರೀಕೃತ ಪ್ರವೇಶ ಘಟಕದಲ್ಲಿ (ನೋಡಲ್ ಸೆಂಟರ್) ಪ್ರವೇಶ ಪಡೆದ ಸೀಟು ಹಂಚಿಕೆ ಪತ್ರ ಕಡ್ಡಾಯವಾಗಿ ಲಗತ್ತಿಸುವುದು**

***ಅಪೂರ್ಣವಾದ ಅರ್ಜಿ, ಇತರ ಅವಶ್ಯಕ ದಾಖಲಾತಿಗಳನ್ನು ಸಲ್ಲಿಸದಿದ್ದಲ್ಲಿ ಹಾಗೂ ನಿಗಧಿಪಡಿಸಿದ ದಿನಾಂಕದ ನಂತರ ತಡವಾಗಿ ಬಂದಂತಹ ವಿದ್ಯಾರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ನಿಗಧಿಪಡಿಸಿದ ದಿನಾಂಕದೊಳಗೆ ಮಂಜೂರಾತಿ ಪಡೆಯದಿದ್ದಲ್ಲಿ ಆಗುಹೋಗುಗಳಿಗೆ ಸಂಬಂಧಿಸಿದ ಪ್ರಿನ್ಸಿಪಾಲರು ಹಾಗೂ ಆಡಳಿತ ಮಂಡಳಿಯವರು ಪೂರ್ಣ ಜವಾಬ್ದಾರರಾಗಿರುತ್ತಾರೆ***

**ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ವಿವರ, ಅರ್ಜಿನಮೂನೆ ಮತ್ತು ಅನುಬಂಧಗಳನ್ನು ಈ ಇಲಾಖೆಯ ಕೆಳಕಂಡ ವೆಬ್‌ಸೈಟ್‌ನಲ್ಲಿ ಪಡೆಯಬಹುದು**

**www.dte.kar.nic.in**

ಸಹ ನಿರ್ದೇಶಕರು (ಪ್ರ)

ಇವರಿಗೆ,

1. ಎಲ್ಲಾ ಸರ್ಕಾರಿ ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರಿಗೆ – ಇವರ ಗಮನಕ್ಕಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಅರ್ಜಿ ನಮೂನೆ '1' ಹಾಗೂ ಅನುಬಂಧ-1 ಮಾಹಿತಿಗಾಗಿ ಲಗತ್ತಿಸಲಾಗಿದೆ.
2. ಪಿಆರ್‌ಓ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು
3. ಸಂಯೋಜನಾಧಿಕಾರಿಯವರು, ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು
4. ಕಛೇರಿ ಪ್ರತಿ.

## ಅರ್ಜಿ ನಮೂನೆ –೧

ಪಾಲಿಟೆಕ್ನಿಕ್ ಹೆಸರು:------------------------------------------------------------------ವರ್ಷ 2011-2012

ಪೋಷಕರ ವಾರ್ಷಿಕ ವರಮಾನ ₹ 2,00,000/- ಕ್ಕಿಂತ ಹೆಚ್ಚು ಇದ್ದು ಭಾರತ ಸರ್ಕಾರದ ವಿದ್ಯಾರ್ಥಿ ವೇತನ ಲಭ್ಯವಿಲ್ಲದ ಪರಿಶಿಷ್ಟ ಜಾತಿ ಮತ್ತು ಪಂಗಡ, ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಮಂಜೂರಾತಿಗಾಗಿ ಸಲ್ಲಿಸುವ ಅರ್ಜಿ.

ಅ) ಅಭ್ಯರ್ಥಿಯ ಹೆಸರು (ಎಸ್ಎಸ್ಎಲ್‌ಸಿ ಅಂಕಪಟ್ಟಿಯಲ್ಲಿರುವಂತೆ) :

ಆ) ತಂದೆ/ತಾಯಿ/ ಪೋಷಕರ ಹೆಸರು ಮತ್ತು ವಿಳಾಸ (ತಂದೆ/ತಾಯಿ ಮರಣ ಹೊಂದಿದ್ದರೆ ಮರಣ ಪತ್ರವನ್ನು ಲಗತ್ತಿಸಬೇಕು) :

ಇ) ಅಭ್ಯರ್ಥಿಯು ಯಾವ ಕೋಟಾದಲ್ಲಿ ಪ್ರವೇಶ ಪಡೆದಿರುತ್ತಾರೆ. (ಇದಕ್ಕೆ ಸಂಬಂಧಿಸಿದಂತೆ ಸೀಟು ಹಂಚಿಕೆ ಪತ್ರ ನೀಡತಕ್ಕದ್ದು.) :

ಈ) ಕರ್ನಾಟಕದಲ್ಲಿ ಖಾಯಂ ವಾಸಸ್ಥಳದವರಾಗಿರುವರೇ? ( ಹೌದು/ಇಲ್ಲ) ಎಂದು ಉತ್ತರಿಸಬೇಕು. :

ಉ) ಕುಟುಂಬದ ವಾರ್ಷಿಕ ವರಮಾನ :

೧) ವರಮಾನದ ಮೂಲ

೨) ವಾರ್ಷಿಕ ವರಮಾನದ ಒಟ್ಟು ಮೊಬಲಗು (ವೇತನ ಪ್ರಮಾಣ ಪತ್ರದ ಪ್ರತಿ ಸಲ್ಲಿಸತಕ್ಕದ್ದು)

ಊ) ಅಭ್ಯರ್ಥಿಯು ಈ ಶೈಕ್ಷಣಿಕ ವರ್ಷದಲ್ಲಿ ಓದುತ್ತಿರುವ ಕೋರ್ಸ್ ಮತ್ತು ವರ್ಷ. :

ಋ) ಡಿಪ್ಲೋಮಾ ವಿದ್ಯಾಭ್ಯಾಸವನ್ನು ಮಧ್ಯದಲ್ಲಿ ಮೊಟಕುಗೊಂಡಿದ್ದರೆ ಆ ಅವಧಿ ಮತ್ತು ಕಾರಣ ತಿಳಿಸಬೇಕು. (ವಿದ್ಯಾರ್ಥಿಯಿಂದ ವಿವರಣೆ ಪತ್ರ ಮತ್ತು ಪ್ರಿನ್ಸಿಪಾಲರ ಶಿಫಾರಸ್ಸು ಲಗತ್ತಿಸಿರಬೇಕು) :

ೠ) ಅಭ್ಯರ್ಥಿಯು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಯಾವ ಗುಂಪಿಗೆ ಸೇರಿದವರು? (ಪ್ರಮಾಣ ಪತ್ರದ ನಕಲನ್ನು ಲಗತ್ತಿಸಬೇಕು.) :

ಎ) ಅಭ್ಯರ್ಥಿಗೆ ಈ ಹಿಂದಿನ ವರ್ಷದಲ್ಲಿ ಅದೇ ವಿನಾಯಿತಿ ಬರುತ್ತಿತ್ತೇ? :

೧) ಇಲ್ಲದಿದ್ದಲ್ಲಿ ಕಾರಣ

೨) ಬರುತ್ತಿದ್ದರೆ ಹಿಂದಿನ ವರ್ಷದಲ್ಲಿ ಮಂಜೂರು ಮಾಡಿದ್ದ ಆದೇಶ ಸಂಖ್ಯೆ, ದಿನಾಂಕ ಮತ್ತು ಮೊಬಲಗು.

ಏ) ಅಭ್ಯರ್ಥಿಯು ಮುಂದಿನ ತರಗತಿಗೆ ತೇರ್ಗಡೆಯಾಗಿದ್ದಾನೆಯೇ? (ಬ್ಯಾಕ್‌ಲಾಗ್ ವಿಷಯ ತೇರ್ಗಡೆಯಾದ ಅಂಕಪಟ್ಟಿ ಸೇರಿದಂತೆ ಎಲ್ಲಾ ಅಂಕಪಟ್ಟಿಗಳನ್ನು ಲಗತ್ತಿಸಬೇಕು.) :

ಈ ಮೇಲೆ ತಿಳಿಸಿರುವ ಎಲ್ಲಾ ಮಾಹಿತಿಗಳು ಸತ್ಯವೆಂದು ಪ್ರಮಾಣೀಕರಿಸಲಾಗಿದೆ.

ಅಭ್ಯರ್ಥಿಯ ತಂದೆ/ತಾಯಿ
ಪೋಷಕರ ಸಹಿ (ತಾಯಿ/ತಂದೆ ಇಲ್ಲದಿದ್ದಲ್ಲಿ)

ಅಭ್ಯರ್ಥಿಯ ಸಹಿ
ದಿನಾಂಕ:

ಅಭ್ಯರ್ಥಿಯು ಸರ್ಕಾರಿ ಕೋಟಾದಲ್ಲಿ ಸೀಟು ಪಡೆದಿರುತ್ತಾರೆಂದು ಯಾವುದೇ ವಂತಿಗೆ ಪಡೆದಿಲ್ಲವೆಂದು ದೃಢೀಕರಿಸಿದೆ. ಶುಲ್ಕ ವಿನಾಯಿತಿಗೆ ಅರ್ಹರಾಗಿರುತ್ತಾರೆ: ಶಿಫಾರಸ್ಸು ಮಾಡಿದೆ.

ಪ್ರಿನ್ಸಿಪಾಲರ ಸಹಿ
ಮೊಹರು

| ಕ್ರ. ಸಂ. | ಪ್ರಮಾಣ ಪತ್ರಗಳು | ಲಗತ್ತಿಸಲಾಗಿದೆಯೇ ಹೌದು/ಇಲ್ಲ | ಕ್ರ. ಸಂ | ಪ್ರಮಾಣ ಪತ್ರಗಳು | ಲಗತ್ತಿಸಲಾಗಿದೆಯೇ ಹೌದು/ಇಲ್ಲ |
|---|---|---|---|---|---|
| 1) | ಆದಾಯ ಪ್ರಮಾಣ ಪತ್ರ | | 4) | ಎಸ್ಎಸ್ಎಲ್‌ಸಿ | |
| 2) | ಜಾತಿ ಪ್ರಮಾಣ ಪತ್ರ | | 5) | ನೋಡಲ್ ಸೆಂಟರಿನ ಸೀಟು ಹಂಚಿಕೆ ಪತ್ರ | |
| 3) | ಹಿಂದಿನ ವರ್ಷಗಳ ಅಂಕಪಟ್ಟಿ | | | | |

ಅನುಬಂಧ-1 ಎ

ಪಾಲಿಟೆಕ್ನಿಕ ಹೆಸರು-----------------------------------------------------------------------

**ಪರಿಶಿಷ್ಟ ಜಾ[illegible] ವಿದ್ಯಾರ್ಥಿಗಳಿಗೆ ಮಾತ್ರ**

2011-2012 ನೇ ಸಾಲಿಗೆ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಮಂಜೂರಾತಿಗೆ ಪ್ರಸ್ತಾವನೆ ಕಳುಹಿಸಲು ವಿವರಣಾ ಪಟ್ಟಿ.

| ಕ್ರ. ಸಂ. | ವಿದ್ಯಾರ್ಥಿಯ ಹೆಸರು | ತರಗತಿ ಮತ್ತು ವಿಭಾಗ | ಜಾತಿ ಮತ್ತು ಪಂಗಡವನ್ನು ಸೂಚಿಸುವುದು | ವಿದ್ಯಾರ್ಥಿಯು ಈ ಹಿಂದಿನ ಸಾಲಿನಲ್ಲಿ ತೇರ್ಗಡೆಯಾಗಿದ್ದಾರೆ/ಅನುತ್ತೀರ್ಣರಾಗಿದ್ದಾರೆಯೇ | ವಿದ್ಯಾರ್ಥಿಯು ಅನುತ್ತೀರ್ಣನಾಗಿದ್ದರೆ ಹಿಂದಿನ ವರ್ಷದ ಮಂಜೂರಾತಿ ಆದೇಶ ಕ್ರಮಸಂಖ್ಯೆ ದಿನಾಂಕ: | ಈ ವಿನಾಯಿತಿಗೆ ಅರ್ಹರೇ ಇದ್ದಾರೆಯೇ | ವಿದ್ಯಾರ್ಥಿಗೆ ಬೇರೆ ಯಾವುದಾದರು ವಿದ್ಯಾರ್ಥಿ ವೇತನ ಪಡೆಯುತ್ತಿದ್ದರೆ ವಿವರ | ಮಂಜೂರಾತಿ ಪಡೆಯುವ ಶುಲ್ಕ ವಿನಾಯಿತಿಯ ವಿವರ (ಸರ್ಕಾರದ ನಿಗದಿಪಡಿಸಿದ ದರದಂತೆ) | | | | | | | |
|---|---|---|---|---|---|---|---|---|---|---|---|---|---|---|---|
| | | | | | | | | ಬೋಧನಾ ಶುಲ್ಕ | ಪ್ರವೇಶ ಶುಲ್ಕ (ಪ್ರಥಮ ವರ್ಷಕ್ಕೆ ಮಾತ್ರ) | ಪ್ರಯೋಗ ಶಾಲಾ ಶುಲ್ಕ | ಗ್ರಂಥಾಲಯ ಶುಲ್ಕ | ಕ್ರೀಡಾ ಶುಲ್ಕ | ಇತರೆ ಶುಲ್ಕ * | ಒಟ್ಟು | ಷರಾ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |
| 1. | | | | | | | | | | | | | | | |
| 2. | | | | | | | | | | | | | | | |
| 3. | | | | | | | | | | | | | | | |
| 4. | | | | | | | | | | | | | | | |
| 5. | | | | | | | | | | | | | | | |

* ಇತರೆ ಶುಲ್ಕ (₹): (1) ಕ್ರೀಡೆ ₹ 65/- (2) ಸಂಘ ಶುಲ್ಕ ₹ 55/- (3) ನಿಯತಕಾಲಿಕ ₹ 50/- (4) ಗುರುತಿನ ಚೀಟಿ ₹ 10/- ಒಟ್ಟು- ₹ 180/-

ಪ್ರವೇಶ ಶುಲ್ಕ ₹ 25/- ಗ್ರಂಥಾಲಯ ಶುಲ್ಕ ₹ 50/- ಪ್ರಯೋಗಾಲಯ ಶುಲ್ಕ ₹ 75/-

**ಸಂಸ್ಥೆಯ ಪ್ರಾಂಶುಪಾಲರು ದೃಢೀಕರಿಸಬೇಕಾದ ಪ್ರಮಾಣ ಪತ್ರಗಳು**

೦೧. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳ ತರಗತಿ ಹಾಜರಾತಿ, ನಡತೆ ಮತ್ತು ಪ್ರಗತಿ ತೃಪ್ತಿಕರವಾಗಿದೆ. ಮೇಲ್ಕಂಡ ಶುಲ್ಕ ವಿನಾಯಿತಿಗೆ ಅರ್ಹರಾಗಿರುತ್ತಾರೆಂದು ದೃಢೀಕರಿಸಿದೆ.

೦೨. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳಿಗೆ ಬೇರೆ ಯಾವ ಶುಲ್ಕ ವಿನಾಯಿತಿ/ ವಿದ್ಯಾರ್ಥಿ ವೇತನ ದೊರೆಯುತ್ತಿಲ್ಲ.

೦೩. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳಿಗೆ ಹಣವನ್ನು ಬೇರೆ ಯಾವ ಮೂಲದಿಂದಲ್ಲೂ ಕ್ಲೈಮ್ ಮಾಡುತ್ತಿಲ್ಲ.

೦೪. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳು ಪಾಲಿಟೆಕ್ನಿಕ್‌ನ ಪ್ರವೇಶದ ದಾಖಲೆಯಲ್ಲಿರುವಂತೆ ಪರಿಶಿಷ್ಟ ಜಾತಿಗೆ ಸೇರಿದವರಾಗಿರುತ್ತಾರೆ.

೦೫. ಮುಂದೆ ಕೋರಿಕೆಯಲ್ಲಿ ಏನಾದರೂ ತಪ್ಪಿದ್ದಲ್ಲಿ ಅಂತಹ ಹಣವನ್ನು ಸಂಸ್ಥೆಯ ಅಧಿಕಾರಿಗಳು ಸರ್ಕಾರಕ್ಕೆ ಮರುಪಾವತಿ ಮಾಡುತ್ತೇವೆ.

೦೬. ಅಭ್ಯರ್ಥಿಯ ಹೇಳಿಕೆ ಹಾಗೂ ದಾಖಲೆಗಳಲ್ಲಿ ಮುಂದೆ ಏನಾದರೂ ತಪ್ಪೆಂದು ತಿಳಿದು ಬಂದಲ್ಲಿ ಪಡೆದಿರುವ ಶುಲ್ಕ ವಿನಾಯಿತಿಯ ಮೊಬಲಗನ್ನು ವಾಪಸ್ಸು ಸಂದಾಯ ಮಾಡುತ್ತೇವೆಂದು ಪಟ್ಟಿಯಲ್ಲಿರುವ ವಿದ್ಯಾರ್ಥಿಗಳಿಂದ ಮುಚ್ಚಳಿಕೆ ಪಡೆಯಲಾಗಿದೆ.

೦೭. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳು ಪಾಲಿಟೆಕ್ನಿಕ್‌ಗೆ ಪ್ರವೇಶ ಪಡೆಯುವಾಗ ಯಾವ ವಂತಿಗೆ ಹಣವನ್ನು ನೀಡಿಲ್ಲ.

೦೮. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದಲ್ಲಿ ಖಾಯಂ ವಾಸಸ್ಥರಾಗಿದ್ದಾರೆ ಮತ್ತು ನಿಯಮಾನುಸಾರ ವ್ಯಾಸಂಗ ಮಾಡುತ್ತಿದ್ದಾರೆ.

೦೯. ಹಿಂದಿನ ವರ್ಷದಲ್ಲಿ ಮಂಜೂರಾಗಿದ್ದ ಶುಲ್ಕ ವಿನಾಯಿತಿಯ ಹಣವನ್ನು ವಿದ್ಯಾರ್ಥಿಗಳಿಗೆ ಪೂರ್ತಿಯಾಗಿ ಮರುಪಾವತಿ ಮಾಡಲಾಗಿದೆ. ಪಾವತಿ ಮಾಡಿದ ಸ್ಕ್ರಿಪ್ ಪಟ್ಟಿಯನ್ನು ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆಗೆ ಕಳುಹಿಸಿಕೊಡಲಾಗಿದೆ. ಕ್ರ. ಸಂ.---------------------------------------- ದಿನಾಂಕ:----------------------.

೧೦. ಪಾವತಿ ಮಾಡದೇ ಇರುವ ಹಣವನ್ನು ಸರ್ಕಾರಕ್ಕೆ ಜಮಾ ಮಾಡಿ ಚಲನ್ನನ್ನು ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರ ಕಛೇರಿಗೆ ಕಳುಹಿಸಿದೆ ಎಂದು ದೃಢೀಕರಿಸಿದ ಕ್ರ. ಸಂ. ---------------------------------- ದಿನಾಂಕ ----------------------.

೧೧. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳು ಸರ್ಕಾರಿ ಕೋಟಾದಲ್ಲಿ ಸೀಟು ಪಡೆದವರೆಂದು ದೃಢೀಕರಿಸಲಾಗಿದೆ.

೧೨. ಶಿಫಾರಸ್ಸು ಮಾಡಿರುವ **ಪರಿಶಿಷ್ಟ ಜಾತಿ** ವಿದ್ಯಾರ್ಥಿಗಳಿಂದ ಯಾವುದೇ ಶುಲ್ಕ ಪಡೆದಿಲ್ಲವೆಂದು ದೃಢೀಕರಿಸಿದೆ.

ದಿನಾಂಕ:

ಸ್ಥಳ:

ಪ್ರಾಂಶುಪಾಲರು

ಅನುಬಂಧ-1ಬಿ

ಪಾಲಿಟೆಕ್ನಿಕ ಹೆಸರು-----------------------------------------------------------------------------------

**ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು, ಮೊತ್ತ**

2011-2012 ನೇ ಸಾಲಿಗೆ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಮೊತ್ತ ಭರಿಸಲು ಪ್ರಸ್ತಾವನೆ ಕಳುಹಿಸಲು ವಿವರಗಳ ಪಟ್ಟಿ.

| ಕ್ರ. ಸಂ. | ವಿದ್ಯಾರ್ಥಿಯ ಹೆಸರು | ತರಗತಿ ಮತ್ತು ವಿಭಾಗ | ಜಾತಿ ಮತ್ತು ಪಂಗಡವನ್ನು ನಮೂದಿಸುವುದು | ವಿದ್ಯಾರ್ಥಿಯು ಹಿಂದಿನ ವರ್ಷದಲ್ಲಿ ತೇರ್ಗಡೆಯಾಗಿದ್ದಲ್ಲಿ ಡಿಟೆನ್/ಅನುತ್ತೀರ್ಣ ಸ್ಥಿತಿಯೇ | ವಿದ್ಯಾರ್ಥಿಯು ಅರ್ಹತೆಯನ್ನು ಹೊಂದಿದಾಗ ಅಥವಾ ಪ್ರವೇಶ ಪಡೆದಿದ್ದಲ್ಲಿ ಹಿಂದಿನ ವರ್ಷದ ಮಂಜೂರಾತಿ ಆದೇಶ ಕ್ರಮಾಂಕ, ದಿನಾಂಕ | ತಂದೆ/ಪೋಷಕರ ವಾರ್ಷಿಕ ಆದಾಯ | ವಿದ್ಯಾರ್ಥಿಗೆ ಬೇರೆ ಯಾವುದಾದರು ವಿದ್ಯಾರ್ಥಿ ವೇತನ ಪಡೆಯುತ್ತಿದ್ದರೆ ವಿವರ | ಮಂಜೂರು ಮಾಡಬೇಕಾದ ಶುಲ್ಕ ವಿನಾಯಿತಿಯ ವಿವರ (ಸರ್ಕಾರ ನಿಗದಿಪಡಿಸಿದ ದರದಂತೆ) | | | | | | | |
|---|---|---|---|---|---|---|---|---|---|---|---|---|---|---|---|
| | | | | | | | | ಬೋಧನಾ ಶುಲ್ಕ | ಪ್ರವೇಶ ಶುಲ್ಕ (ಪ್ರಥಮ ವರ್ಷಕ್ಕೆ ಮಾತ್ರ) | ಪ್ರಯೋಗಾಲಯ ಶುಲ್ಕ | ವಾಚನಾಲಯ ಶುಲ್ಕ | ಕ್ರೀಡಾ ಶುಲ್ಕ | ಇತರೆ ಶುಲ್ಕ * | ಒಟ್ಟು | ಷರಾ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |
| 1. | | | | | | | | | | | | | | | |
| 2. | | | | | | | | | | | | | | | |
| 3. | | | | | | | | | | | | | | | |
| 4. | | | | | | | | | | | | | | | |
| 5. | | | | | | | | | | | | | | | |

* ಇತರೆ ಶುಲ್ಕ (₹): (1) ಕ್ರೀಡೆ ₹ 65/- (2) ಸಂಘ ಶುಲ್ಕ ₹ 55/- (3) ನಿಯತಕಾಲಿಕ ₹ 50/- (4) ಗುರುತಿನ ಚೀಟಿ ₹ 10/- ಒಟ್ಟು ₹ 180/-

ಪ್ರವೇಶ ಶುಲ್ಕ ₹ 25/- ವಾಚನಾಲಯ ಶುಲ್ಕ ₹ 50/- ಪ್ರಯೋಗಾಲಯ ಶುಲ್ಕ ₹ 75/-

**ಸಂಸ್ಥೆಯ ಪ್ರಾಂಶುಪಾಲರು ದೃಢೀಕರಿಸಬೇಕಾದ ಪ್ರಮಾಣ ಪತ್ರಗಳು**

೦೧. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳ ತರಗತಿ ಹಾಜರಾತಿ, ನಡತೆ ಮತ್ತು ಪ್ರಗತಿ ತೃಪ್ತಿಕರವಾಗಿದೆ. ಪೂರ್ಣ ಶುಲ್ಕ ವಿನಾಯಿತಿಗೆ ಅರ್ಹರಾಗಿರುತ್ತಾರೆಂದು ದೃಢೀಕರಿಸಿದೆ.

೦೨. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳಿಗೆ ಬೇರೆ ಯಾವ ಶುಲ್ಕ ವಿನಾಯಿತಿ/ ವಿದ್ಯಾರ್ಥಿ ವೇತನ ದೊರೆಯುತ್ತಿಲ್ಲ.

೦೩. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳಿಗೆ ಹಣವನ್ನು ಬೇರೆ ಯಾವ ಮೂಲದಿಂದಲೂ ಕ್ಲೈಮ್ ಮಾಡುತ್ತಿಲ್ಲ.

೦೪. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳು ಪಾಲಿಟೆಕ್ನಿಕ್‌ನ ಪ್ರವೇಶದ ದಾಖಲೆಯಲ್ಲಿರುವಂತೆ ಪರಿಶಿಷ್ಟ ಜಾತಿಗೆ ಸೇರಿದವರಾಗಿರುತ್ತಾರೆ.

೦೫. ಮುಂದೆ ಶೋಧನೆಯಲ್ಲಿ ಏನಾದರೂ ತಪ್ಪಿದ್ದಲ್ಲಿ ಅಂತಹ ಹಣವನ್ನು ಸಂಸ್ಥೆಯ ಅಧಿಕಾರಿಗಳು ಸರ್ಕಾರಕ್ಕೆ ಹಿಂದಿರುಗಿಸಲು ಬದ್ಧರಾಗಿರುತ್ತೇವೆ.

೦೬. ಅಭ್ಯರ್ಥಿಯು ಹೇಳಿಕೆ ಹಾಗೂ ದಾಖಲೆಗಳಲ್ಲಿ ಮುಂದೆ ಏನಾದರೂ ತಪ್ಪೆಂದು ತಿಳಿದು ಬಂದಲ್ಲಿ ನೀಡಿರುವ ಶುಲ್ಕ ವಿನಾಯಿತಿಯ ಮೊಬಲಗನ್ನು ವಾಪಸ್ಸು ಸಂದಾಯ ಮಾಡುತ್ತೇವೆಂದು ಪಟ್ಟಿಯಲ್ಲಿರುವ ವಿದ್ಯಾರ್ಥಿಗಳಿಂದ ಮುಚ್ಚಳಿಕೆ ಪಡೆಯಲಾಗಿದೆ.

೦೭. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳು ಪಾಲಿಟೆಕ್ನಿಕ್‌ಗೆ ಪ್ರವೇಶ ಪಡೆಯುವಾಗ ಯಾವ ವಂತಿಗೆ ಹಣವನ್ನು ನೀಡಿಲ್ಲ.

೦೮. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದಲ್ಲಿ ಖಾಯಂ ವಾಸಸ್ಥರಾಗಿದ್ದಾರೆ ಮತ್ತು ನಿಯಮಾನುಸಾರ ವ್ಯಾಸಂಗ ಮಾಡುತ್ತಿದ್ದಾರೆ.

೦೯. ಹಿಂದಿನ ವರ್ಷದಲ್ಲಿ ಮಂಜೂರಾಗಿದ್ದ ಶುಲ್ಕ ವಿನಾಯಿತಿಯ ಹಣವನ್ನು ವಿದ್ಯಾರ್ಥಿಗಳಿಗೆ ಪೂರ್ತಿಯಾಗಿ ಮರುಪಾವತಿ ಮಾಡಲಾಗಿದೆ. ಪಾವತಿ ಮಾಡಿದ ಸ್ಟ್ಯಾಂಪ್ ರಶೀದಿಯನ್ನು ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆಗೆ ಕಳುಹಿಸಿ ಕೊಡಲಾಗಿದೆ. ಕ್ರ. ಸಂ.------------------------------------------ ದಿನಾಂಕ:-----------------------.

೧೦. ಹಿಂದೆ ಮರುಪಾವತಿಯಾದ ಹಣವನ್ನು ಸರ್ಕಾರಕ್ಕೆ ಜಮಾ ಮಾಡಿ ಅದರ ಪ್ರತಿಯನ್ನು ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರ ಕಛೇರಿಗೆ ಕಳುಹಿಸಿದೆ ಎಂದು ದೃಢೀಕರಿಸಿದ ಕ್ರ. ಸಂ. ------------------------------ ದಿನಾಂಕ:-----------------------.

೧೧. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳು ಸರ್ಕಾರಿ ಕೋಟಾದಲ್ಲಿ ಸೀಟು ಪಡೆದವರೆಂದು ದೃಢೀಕರಿಸಲಾಗಿದೆ.

೧೨. ಶಿಫಾರಸ್ಸು ಮಾಡಿರುವ **ಪರಿಶಿಷ್ಟ ಪಂಗಡದ** ವಿದ್ಯಾರ್ಥಿಗಳಿಂದ ಯಾವುದೇ ಶುಲ್ಕ ಪಡೆದಿಲ್ಲವೆಂದು ದೃಢೀಕರಿಸಿದೆ.

ದಿನಾಂಕ:

ಸ್ಥಳ:

ಪ್ರಾಂಶುಪಾಲರು